ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

**ಕೃಷ್ಣ ಮೇಲ್ದಂಡೆ ಯೋಜನೆಯ ಮುಳುಗಡೆ ಪರಿಹಾರ ಧನ ವಿತರಣೆ**

5040 - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬಿಜಾಪುರ ಜಿಲ್ಲೆಯ ಕನಗೂರು ಮತ್ತು ಸಿರಬೂರ ಗ್ರಾಮಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ವ್ಯಾಪ್ತಿಯಲ್ಲಿ ಬರುತ್ತದೆಯೇ?*

2. *ಹಾಗಿದ್ದಲ್ಲಿ ಈ ಮುಳುಗಡೆ ಗ್ರಾಮಗಳ ಮನೆಗಳಿಗೆ ಸಹಕಾರ ಪರಿಹಾರಧನ ನೀಡಲಾಗಿದೆಯೇ?*

3. *ಈ ಪರಿಹಾರ ಧನವನ್ನು ಯಾವಾಗ ನೀಡಲಾಗುವುದು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

1. ಕನಗೂರು ಮತ್ತು ಸಿರಬೂರು ಗ್ರಾಮಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ವ್ಯಾಪ್ತಿಯಲ್ಲಿ ಬರುತ್ತವೆ.

2. ಕನಗೂರು ಗ್ರಾಮದ ಕಟ್ಟಡಗಳ ಐತೀರ್ಪು ರಚನೆ ಕಾರ್ಯಪೂರ್ಣ ಮುಗಿದಿದ್ದು ಪರಿಹಾರ ಧನ ವಿತರಣೆಯ ಪ್ರಕ್ರಿಯೆ ಪ್ರಗತಿಯಲ್ಲಿದೆ ಹಾಗೂ ಸಿರಬೂರು ಗ್ರಾಮದ ಕಟ್ಟಡಗಳ ಪರಿಹಾರಧನವನ್ನು ಈಗಾಗಲೇ ನೀಡಲಾಗಿದೆ.

3. ಮೇಲಿನಂತೆ.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಸಹಾಯಧನ**

5041 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98, 1998-99, 1999-2000ದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಸರಕಾರ ಕೊಟ್ಟ ಸಹಾಯ ಧನವೆಷ್ಟು? ಹಾಗೂ 2000-2001ರಲ್ಲಿ ನೀಡಲು ನಿಗಧಿ ಮಾಡಿದ ಸಹಾಯ ಧನವೆಷ್ಟು?*

ಆ) *ಈ ನಿಗಮಕ್ಕೆ ಒಂದು ಕೋಟಿಗಿಂತ ಹೆಚ್ಚು ಬಾಕಿ ಕೊಡಬೇಕಾಗಿರುವವರು ಯಾರು ಯಾರು ಹಾಗೂ ಎಷ್ಟು ಮೊತ್ತ?*

ಇ) *ಈ ನಿಗಮ 31.3.2000ಕ್ಕೆ ಹೊಂದಿರುವ ಹಾನಿ ಎಷ್ಟು?*